ಒಂದು ಹಕ್ಟೇರಗೆ 150 ರೂಪಾಯಿಗಳು ಎಂದು ಮಾತ್ರ ಇರುವುದರಿಂದ ಹೆಚ್ಚು ಕಡಿಮೆ ಅನುದಾನ ಇದೆ. ಸನ್ಮಾನ್ಯ ಅಧ್ಯಕ್ಷರೆ, ಆ ಕಾರಣದಿಂದ ಮಾನ್ಯ ಸದಸ್ಯರ ಆತಂಕವನ್ನು ನಾವು ನೋಡುತ್ತಿದ್ದೇವೆ. ಈಗ ನೀರನ್ನು ನಿಲ್ಲಿಸಿದ ತಕ್ಷಣ ದುರಸ್ತಿ ಕೆಲಸವನ್ನು ಕೂಡ ಲಭ್ಯವಿರುವ ಅನುದಾನದಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮುಧೋಳ್ ತಾಲ್ಲೂಕಿನಲ್ಲಿ ನೀರಾವರಿ ಕ್ಷೇತ್ರ ಹೆಚ್ಚು ಇದೆ. ಕಾಲುವೆ ಲೆಂತ್ ಕೂಡ ಹೆಚ್ಚು ಇದೆ. ಆದರೆ ಅನುದಾನ ಬಿಡುಗಡೆ ಮಾಡಿರುವುದರಲ್ಲಿ ಮಾತ್ರ ಜಮಖಂಡಿ ತಾಲ್ಲೂಕಿಗೆ ಹೆಚ್ಚು ಮಾಡಿ, ಮುಧೋಳ್ ತಾಲ್ಲೂಕಿಗೆ ಕಡಿಮೆ ಮಾಡಿದ್ದಕ್ಕೆ ಸರ್ಕಾರದಿಂದ ಒಂದು ನಿರ್ದಿಷ್ಟವಾದ ಉತ್ತರ ಸಿಗಲಿಲ್ಲ. ದಯಮಾಡಿ ಉತ್ತರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ ನಿಜವಾಗಿಯೂ ಶಾಸಕರ ಆತಂಕ ಕೂಡ ಗೊತ್ತಿದೆ. ಅಲ್ಲಿ 64735 ಹೆಕ್ಟೇರ್ ಇರುವುದರಿಂದ ಹೆಚ್ಚು ಅನುದಾನ ಬರಬೇಕೆಂದು ಹೇಳುತ್ತಿದ್ದಾರೆ. ಆದರೆ ಹೆಚ್ಚಿನ ದುರಸ್ತಿ ಅವಶ್ಯಕತೆ ಇರತಕ್ಕಂಥದ್ದು ಜಮಖಂಡಿ ತಾಲ್ಲೂಕಿನ ಭಾಗದಲ್ಲಿ, ಅಲ್ಲಿ ಸ್ವಲ್ಪ ಹೆಚ್ಚು ಆಗಬಹುದು. ಹಿಂದೆ 1991-92 ರಿಂದ 1993-94ರವರೆಗೆ ಕೊಟ್ಟಿರತಕ್ಕಂತಹ ಹಣದಲ್ಲಿ ಜಮಖಂಡಿ ತಾಲ್ಲೂಕಿಗೆ ಹೆಚ್ಚು ಇದೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ 1994-95ರ ಸಾಲಿನಲ್ಲಿಯೂ ಕೂಡ 40 ಲಕ್ಷ ಮುಧೋಳ್ ತಾಲ್ಲೂಕಿನಲ್ಲಿ ಕೊಟ್ಟಿದ್ದರೆ, 49 ಲಕ್ಷ ಅದರಲ್ಲಿ ಕೊಟ್ಟಿದ್ದಾರೆ. ಆದರೆ ಈ ವರ್ಷ 1995-96ನೇ ಸಾಲಿನಲ್ಲಿ ಘಟಪ್ರಭಾ ಎಡದಂಡೆ ಕಾಲುವೆಯ ಕೆಲಸಕ್ಕೆ 72 ಲಕ್ಷ ರೂಪಾಯಿಗಳು ಹಣ ಬಿಡುಗಡೆ ಆಗಿರುವುದರಿಂದ ಅದನ್ನು ಜಮಖಂಡಿ ಭಾಗಕ್ಕೆ 41.83 ಲಕ್ಷ, ಅದೇ ರೀತಿ ಬೀಳಗಿ ಭಾಗದಲ್ಲಿ 48.65 ಬಿಡುಗಡೆ ಮಾಡಿದ್ದೇವೆ. ಆದ್ದರಿಂದ 1995-96ರ ಸಾಲಿನಲ್ಲಿ ಖಂಡಿತವಾಗಿ ನಾವು ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಮುಂದೆ ಕೂಡ ಅದೇ ಅನುಪಾತದಲ್ಲಿ ಕೊಡುತ್ತೇವೆ ಎನ್ನುವ ಮಾತನ್ನು ತಮ್ಮ ಮೂಲಕ ಭರವಸೆ ಕೊಡುತ್ತೇನೆ.

ಸಾದಲಿ-ಹೊಸಕೆರೆ ಕೋಡಿಯ ಉಡಾವಣೆಯಿಂದ ಮುಳುಗಡೆಯಾಗಲಿರುವ ಜಮೀನಿನ ಸ್ವಾಧೀನತೆ.

141 - ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಸಾದಲಿ-ಹೊಸಕೆರೆಯ ಕೋಡಿ (ವೇಸ್ಟ್‌ವೇರ್) ಯನ್ನು ಯಾವ ಸಾಲಿನಲ್ಲಿ ಉಡಾವಣೆ ಮಾಡಲಾಗಿರುತ್ತದೆ.

ಆ) ಈ ಉಡಾವಣೆಯಿಂದ ಮುಳುಗಡೆಯಾಗಿರುವ ಒಟ್ಟು ವಿಸ್ತೀರ್ಣವನ್ನು (ಸರ್ವೆ ನಂಬರ್‌ವಾರು ವಿವರಗಳನ್ನು ನೀಡುವುದು).

ಇ) ಈ ವಿಷಯಲ್ಲಿನ ಭೂ ಸ್ವಾಧೀನ ಪ್ರಕ್ರಿಯೆಗಳು ಈಗ ಯಾವ ಹಂತದಲ್ಲಿವೆ?

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 1964 ಸಾಲಿನಲ್ಲಿ ಮಾಡಲಾಗಿದೆ.

ಆ) ಉಡಾವಣೆಯಿಂದ ಮುಳುಗಡೆಯಾಗಿರುವ ಒಟ್ಟು ವಿಸ್ತೀರ್ಣ 2 ಎಕರೆ 18 $^{3}/_{4}$ ಗುಂಟೆ ಸರ್ವೆ ನಂಬರುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಸರ್ವೆ ನಂ:	ವಿಸ್ತೀರ್ಣ ಎಕರೆ ಗುಂಟೆ
72:1	0.05
72:3	0.35
73:3	0.22 $^{3}/_{4}$
65:4	0.26 $^{3}/_{4}$
119	0.10
	ಒಟ್ಟು : 2.18 $^{3}/_{4}$

ಇ) ಸರ್ವೆ ನಂ : 65:ರಲ್ಲಿ ~~0.25 $^{3}/_{4}$ ಗುಂಟೆ ಮತ್ತು~~ ಸರ್ವೆ ನಂ: 73 :3 ರಲ್ಲಿ 0.22 ಗುಂಟೆ ವಿಸ್ತೀರ್ಣದ ಭೂಸ್ವಾಧೀನದ ಪ್ರಕ್ರಿಯೆ ಮುಗಿದು, ಭೂಮಾಲೀಕರಿಗೆ ಪರಿಹಾರ ನೀಡಲಾಗಿದೆ. ಉಳಿಕೆ ಸರ್ವೆ ನಂಬರುಗಳ ಬಾಬ್ತು ಸ್ಥಳ ಪರಿಶೀಲಿಸಲಾಗಿದ್ದು ಭೂ ಸ್ವಾಧೀನ ಪ್ರಸ್ತಾವನೆ ಪ್ರಗತಿಯಲ್ಲಿದೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಸಾದಲಿ ಹೊಸಕೆರೆ ಎನ್ನವಂತಹ ಒಂದು ಕೋಡಿಯನ್ನು ಸುಮಾರು 1964ನೇ ಇಸವಿಯಲ್ಲಿ ಎತ್ತರ ಮಾಡುತ್ತಾರೆ. ಉಡಾವಣೆ ಮಾಡುತ್ತಾರೆ, ಆ ಸಂದರ್ಭದಲ್ಲಿ ಸುಮಾರು ಎರಡು ಎಕರೆ 18 ಗುಂಟೆ ಮುಳುಗಡೆ ಆಗುತ್ತದೆ ಎನ್ನತಕ್ಕಂತಹ ವಿಚಾರವನ್ನು ಇಲಾಖೆಯವರು ಗುರುತಿಸಿದ್ದಾರೆ. ಆದರೆ ಆ ಪೈಕಿ ಸುಮಾರು ಎರಡು ಸರ್ವೇ ನಂಬರ್‌ಗೆ ಭೂ ಸ್ವಾಧೀನ ಕಾರ್ಯಕ್ರಮವನ್ನು ಮುಗಿಸಿಕೊಂಡು ಅದಕ್ಕೆ ಭೂ ಮಾಲೀಕರಿಗೆ ಪರಿಹಾರವನ್ನು ಕೊಟ್ಟಿದ್ದಾರೆ. ಇನ್ನು ಉಳಿಕೆ ಇರತಕ್ಕಂತಹ ನಂಬರ್ ಸುಮಾರು 1964ನೇ ಇಸವಿಯಿಂದ ಇಲ್ಲಿಯವರೆಗೆ ಏನು ಹೇಳತಕ್ಕಂತಹ ಮಾತನ್ನು ಹೇಳುತ್ತಾರೆ. ಸುಮಾರು 32-33 ವರ್ಷಗಳ ನಂತರವೂ ಇನ್ನು ಭೂಸ್ವಾಧೀನ ಕಾರ್ಯಕ್ರಮ ಪ್ರಗತಿಯಲ್ಲಿ ಇದೆ ಅಂದರೆ ಇಲಾಖೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ, ಭೂ ಮಾಲೀಕರ ಪರಿಸ್ಥಿತಿ ಏನು ಈ ತರಹ ಆದರೆ ಸರ್ಕಾರದ ಪೇಗೆ ಕೆಲಸ ಮಾಡುತ್ತದೆ, ಇಲಾಖೆಯವರು ಎಷ್ಟರ ಮಟ್ಟಿಗೆ ಇದರ ಬಗ್ಗೆ ಎಚ್ಚರದಿಂದಿದ್ದಾರೆ, ಎನ್ನತಕ್ಕತ ವಿಚಾರದ ಬಗ್ಗೆ ಸರ್ಕಾರ ಉತ್ತರ ಕೊಡಬೇಕು. ಜೊತೆಗೆ ಇನ್ನು ಎಷ್ಟು ದಿವಸಗಳ ಒಳಗೆ ಭೂಸ್ವಾಧೀನ ಮಾಡುತ್ತೀರಿ, ಸಂಬಂಧಪಟ್ಟ ಭೂ ಮಾಲೀಕರಿಗೆ ಎಷ್ಟು ದಿವಸಗಳ ಒಳಗೆ ಪರಿಹಾರ ಕೊಡುವುದಕ್ಕೆ

ಸಾಧ್ಯ ಇದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಕೇಳಿದ ಹಾಗೆ ಈ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ. ಅವರು ಹೇಳಿದ ಪ್ರಕಾರ ಸರ್ವೇ ನಂ. 72-73-65-73 ಇಲ್ಲಿ ಜಮೀನು ಮುಳುಗಡೆಯಾಗುವುದು ಸರ್ವೇಯಲ್ಲಿ ತಿಳಿದುಬಂದಿದೆ. ಈ ಎಲ್ಲಾ ಸರ್ವೇ ನಂಬರ್ ಗಳಲ್ಲಿ ಮುಳುಗಡೆ ಆಗಿರತಕ್ಕಂತಹ ಒಟ್ಟು ವಿಸ್ತೀರ್ಣ ಎರಡು ಎಕರೆ 15 ಗುಂಟೆ. ಸರ್ವೇ ನಂ. 554 ವಿಸ್ತೀರ್ಣ ಹಾಗೂ ಸರ್ವೇ ನಂ. 73 ಗುಂಟೆ ಭೂಸ್ವಾಧೀನ ಪ್ರಕ್ರಿಯೆ ಭೂ ಪರಿಹಾರ ನೀಡಲಾಗಿದೆ. ಕೆಲವು ಭಾಗ ನೀಡಲಾಗಿದೆ, ಉಳಿದ ಸರ್ವೇ ನಂಬರ್ ಸ್ಥಳ ಪರಿಶೀಲನೆ ಮಾಡಿ ಕೂಡಲೇ ಅದಕ್ಕೆ ಪರಿಹಾರ ಒದಗಿಸಿಕೊಡುತ್ತೇವೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಭೂ ಸ್ವಾಧೀನ ಕ್ರಮ ಪ್ರಗತಿಯಲ್ಲಿದೆ ಎಂದರೆ ಏನು ಅರ್ಥ ಇದಕ್ಕೆ.

ಅಧ್ಯಕ್ಷರು : ಸರ್ಕಾರಗಳು ಇರುವುದೇ ಹಾಗೆ, ಕಳೆದ ಐದು ವರ್ಷಗಳಿಂದ ಹಾಗೆ ಇದೆ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಪ್ರಕ್ರಿಯೆ ಮುಗಿದ ಮುಕ್ಕಾಲು ಭಾಗಗಳಲ್ಲಿ ಭೂ ಸ್ವಾಧೀನ ಪರಿಹಾರ ಕೊಟ್ಟಿದ್ದೇವೆ.

ಶ್ರೀ ವಿ. ಮುನಿಯಪ್ಪ : ನಿರ್ದಿಷ್ಟವಾಗಿ ಉತ್ತರ ಕೊಟ್ಟು ಅದಕ್ಕೆ ಸಂಬಂಧಪಟ್ಟಂತಹ ಇಲಾಖೆಗೆ ಆದೇಶ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮುಕ್ಕಾಲು ಭಾಗ ಈಗಾಗಲೇ ಹಣ ಸಂದಾಯ ಆಗಿದೆ. ಉಳಿದ ಭಾಗವನ್ನು ಕೂಡಲೇ ಕೊಡುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ.

ಶ್ರೀ ವಿ. ಮುನಿಯಪ್ಪ : ಅರ್ಧ ಭಾಗ ಮಾತ್ರ ಬಿಡುಗಡೆ ಆಗಿದೆ ಅಷ್ಟೆ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ತಾವೇ ಮಂತ್ರಿಯಾಗಿದ್ದೀರಿ ಇಷ್ಟು ವರ್ಷ ಏಕೆ ಬಿಟ್ಟಿದ್ದೀರಿ?

ಶ್ರೀ ವಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ದಯವಿಟ್ಟು ಆದೇಶ ಕೊಟ್ಟು ತಕ್ಷಣ ಆ ಪ್ರಕ್ರಿಯೆಯನ್ನು ಮುಗಿಸಿ, ಭೂ ಸ್ವಾಧೀನ ಮಾಡಿಕೊಂಡು ಅವರಿಗೆ ಪರಿಹಾರ ಕೊಡುವುದಕ್ಕೆ ಆದೇಶ ಕೊಡಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೆ, ಮುಕ್ಕಾಲು ಭಾಗ ನಾವು ಹಣ ಕೊಟ್ಟು ಆಗಿದೆ, ಪಾಲು ಭಾಗ ಈ ತಕ್ಷಣ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಮುನಿಯಪ್ಪ : ನಿರ್ದಿಷ್ಟವಾಗಿ ಇಲಾಖೆಯವರಿಗೆ ಒಂದು ಆದೇಶ ಕೊಡಿ. ಇಷ್ಟು

ವಿವಸದ ಒಳಗಡೆ ಭೂಸ್ವಾಧೀನ ಮಾಡಿಕೊಂಡು ಅವರಿಗೆ ಹಣ ಕೊಡುತ್ತೇವೆ ಎಂದು ಹೇಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಇಷ್ಟು ವರ್ಷ ಅವರೇ ಅಧಿಕಾರದಲ್ಲಿದ್ದರೂ ಏಕೆ ಕೊಡಲಿಲ್ಲ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ.

ಶ್ರೀ ವಿ. ಮುನಿಯಪ್ಪ : ನಮ್ಮ ಗಮನಕ್ಕೆ ಬಂದಿರುವುದು ಇತ್ತೀಚೆಗೆ. ನಮ್ಮ ಕಾಲದಲ್ಲಿಯೇ ತಂದು ಕೊಟ್ಟಿದ್ದರೆ, ನಾವು ವಿಂಡಿತವಾಗಿ ಕೊಡುತ್ತಿದ್ದೆವು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾವು ಬಂದ ಮೇಲೆ ಇತ್ತೀಚೆಗೆ ಹಣ ಕೊಟ್ಟಿವೆ ಆಗಿದೆ.

ಶ್ರೀ ವಿ. ಮುನಿಯಪ್ಪ : ನಮ್ಮ ಗಮನಕ್ಕೆ ಬಂದಿದ್ದರೆ, ತಕ್ಷಣ ಸರ್ಕಾರ ಅದಕ್ಕೆ ಹಣ ಬಿಡುಗಡೆ ಮಾಡುತ್ತಿತ್ತು.

ಸೂರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಅಂಗನವಾಡಿಗಳ ಸಂಖ್ಯೆ

142 - ಶ್ರೀ ಕುಂಭೆ ಸುಂದರರಾವ್ (ಸೂರತ್ಕಲ್) : ಮಾನ್ಯ ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೂರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತಿವೆ?

ಆ) ಕಾರ್ಯ ನಿರ್ವಹಿಸುವವುಗಳಿಗೆ ಕಟ್ಟಡಗಳಿರುವ ಅಂಗನವಾಡಿಗಳು ಎಷ್ಟು, ಎಷ್ಟು ಬಾಡಿಗೆ ಕಟ್ಟಡಗಳಲ್ಲಿವೆ.

ಇ) ಹಾಗಿದ್ದಲ್ಲಿ ಕಟ್ಟಡಗಳನ್ನು ಎಂದು ನಿರ್ಮಿಸಲಾಗುವುದು.

ಈ) ಸ್ಥಳೀಯ ಕಾರ್ಯಕರ್ತೆಯರು ಸೇವೆ ಸಲ್ಲಿಸುತ್ತಿರುವ ಅಂಗನವಾಡಿಗಳು ಸಂಖ್ಯೆ ಎಷ್ಟು, ಸ್ಥಳೀಯರಲ್ಲದವರ ಸ್ಥಾನದಲ್ಲಿ ಸ್ಥಳೀಯರಿಗೆ ಕೊಡುವ ಸರಕಾರದ ಯೋಜನೆ ಇದೆಯೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವೆ) :

ಅ) ಸೂರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ 72 ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತಿವೆ.

ಆ) 10 ಅಂಗನವಾಡಿಗಳು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿವೆ. ಬಾಡಿಗೆ ಕಟ್ಟಡದಲ್ಲಿ ಯಾವುದೇ ಅಂಗನವಾಡಿಗಳು ನಡೆಯುತ್ತಿಲ್ಲ. ಬದಲಾಗಿ ಉಳಿದ ಅಂಗನವಾಡಿಗಳು ಸಮುದಾಯದ ಅಂದರೆ ಯುವಕ ಮಂಡಲಿ, ಯುವತಿ ಮಂಡಳಿ ಮಹಿಳಾ ಮಂಡಳಿ, ಪಂಚಾಯಿತಿ ಕಟ್ಟಡಗಳಲ್ಲಿ ನಡೆಯುತ್ತಿವೆ.

ಇ) 1996-97ನೇ ಸಾಲಿನಲ್ಲಿ 8 ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಯೋಜನೆಯಡಿಯಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ. ಉಳಿದ ಅಂಗನವಾಡಿಗಳಿಗೆ ಹಂತ ಹಂತವಾಗಿ ಮುಂಬರುವ